ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

OFFICE OF THE DEPUTY TAHASILDAR, THAMBRAHALLI-583224

ಎ.ವಿಲೇ.ನಂ.ಕಂ.ಪಹಣಿ.ವಿವಾದ/32/2015-16 ದಿನಾಂಕ:07.04.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

ವಾದಿ

1) ಗಡ್ಡದ ವೀರಭದ್ರಗೌಡ 2) ಗಡ್ಡದ ವೆಂಕಟೇಶಗೌಡ ತಂದೆ ಲೇಟ್ ತಾರಾನಾಥಗೌಡ ಎಲ್ಲರ ವಾಸ ತಂಬ್ರಹಳ್ಳಿ ಗ್ರಾಮ ಹ.ಬೊ.ಹಳ್ಳಿ ತಾಲೂಕು

ಪ್ರತಿವಾದಿ

ಕಂದಾಯ ನಿರೀಕ್ಷಕರು ತಂಬ್ರಹಳ್ಳಿ

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ತಂಬ್ರಹಳ್ಳಿ | 484/ಎಫ್ & 484/ಜಿ | 2.22 ಮತ್ತು 2.64 ಎಕರೆ |

*****

**ಪೀಠಿಕೆ:**

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ತಂಬ್ರಹಳ್ಳಿ ಗ್ರಾಮದ ಸ.ನಂ.484/ಎಫ್ ಮತ್ತು 484/ ಪೈಕಿ ವಿಸ್ತೀರ್ಣ ಕ್ರಮವಾಗಿ 2.22 ಮತ್ತು 2.64 ಎಕರೆ ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಪಾಲು ವಿಭಾಗ ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಹೆಚ್.12/2015-16, ರಲ್ಲಿ ಸಂಬಂಧಿಸಿದ ಪಾಲು ವಿಭಾಗದ ಶುಲ್ಕವನ್ನು ಪಾವತಿ ಮಾಡದೇ ಇರುವುದರಿಂದ ಈ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:17.12.2015 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪ್ರಕಾರ ದಿನಾಂಕ:25.06.2015 ರಂದು ದಿ.ತಾರನಾಥಗೌಡ ಇವರ ಮಕ್ಕಳಾದ 1ನೇ ಮತ್ತು 2ನೇ ವಾದಿಗಳು ವ್ಯಾಜ್ಯದ ಜಮೀನುಗಳ ಪೈಕಿ 1ನೇ ವಾದಿಯಾದ ಗಡ್ಡದ ವೀರಭದ್ರಗೌಡ ಇವರಿಗೆ ಸ.ನಂ. 484/ಎಫ್ ವಿಸ್ತೀರ್ಣ 2.22 ಎಕರೆ ಜಮೀನನ್ನು ಹಾಗೂ 2ನೇ ವಾದಿಗಳಾದ ಗಡ್ಡದ ವೆಂಕಟೇಶಗೌಡ ಇವರಿಗೆ ಸ.ನಂ. 484/ಜಿ ವಿಸ್ತೀರ್ಣ 2.64 ಎಕರೆ ಜಮೀನನ್ನು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ, ಅದರಂತೆ ಹಕ್ಕುಬದಲಾವಣೆಗಾಗಿ ಮನವಿ ಸಲ್ಲಿಸಿರುತ್ತಾರೆ.

ಪ್ರಸ್ತುತ ಪ್ರಶ್ನಿತ ಹಕ್ಕುಬದಲಾವಣೆಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಸಂಬಂಧಿಸಿದ ಪಾಲು ವಿಭಾಗ ಮುದ್ರಾಂಕ ಶುಲ್ಕವನ್ನು ಅರ್ಜಿದಾರರು ಪಾವತಿಸದೇ ಇರುವುದರಿಂದ ಸದರಿ ಪ್ರಕರಣವನ್ನು ವಿವಾದಾಸ್ಪದವೆಂದು ಪರಿಗಣಿಸಿ ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಸಲ್ಲಿಸಿರತ್ತಾರೆ.

ವಾದಿಗಳು ವಿಚಾರಣೆಗೆ ಹಾಜರಾಗಿ ಸಂಬಂಧಿಸಿದ ಪಾಲುವಿಭಾಗದ ಮುದ್ರಾಂಕ ಶುಲ್ಕವನ್ನು ಪಾವತಿಸಿ ಸದರಿ ರಸೀದಿಯನ್ನು ಹಾಗೂ ಸಂಬಂಧಿಸಿದ ಜಮೀನುಗಳಿಗೆ ಭೂ ಕಂದಾಯವನ್ನು ಪಾವತಿಸಿದ ರಸೀದಿಯನ್ನು ಹಾಜರುಪಡಿಸಿರುತ್ತಾರೆ ಕಾರಣ ವಾದಿಗಳ ಕೋರಿಕೆಯಂತೆ ವ್ಯಾಜ್ಯದ ಜಮೀನುಗಳ ಪೈಕಿ 1ನೇ ವಾದಿಯಾದ ಗಡ್ಡದ ವೀರಭದ್ರಗೌಡ ಇವರಿಗೆ ಸ.ನಂ. 484/ಎಫ್ ವಿಸ್ತೀರ್ಣ 2.22 ಎಕರೆ ಜಮೀನನ್ನು ಹಾಗೂ 2ನೇ ವಾದಿಗಳಾದ ಗಡ್ಡದ ವೆಂಕಟೇಶಗೌಡ ಇವರಿಗೆ ಸ.ನಂ. 484/ಜಿ ವಿಸ್ತೀರ್ಣ 2.64 ಎಕರೆ ಜಮೀನನ್ನು ದಿನಾಂಕ:25.06.2015 ರಂದು ಮಾಡಿಕೊಂಡ ಪಾಲು ವಿಭಾಗ ದಸ್ತಾವೇಜು ಪ್ರಕಾರ ಖಾತೆ ಮಾಡುವುದು ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಗಿನಂತೆ ಆದೇಶ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಗ್ರಾಮದ ವಿವಾದಾಸ್ಪದ ಜಮೀನುಗಳ ಪೈಕಿ ಪಾಲು ವಿಭಾಗ ದಸ್ತಾವೇಜು ದಿನಾಂಕ:25.06.2015 ರ ಮೇರೆಗೆ 1ನೇ ವಾದಿಯಾದ ಗಡ್ಡದ ವೀರಭದ್ರಗೌಡ ಇವರ ಹೆಸರಿಗೆ ಸ.ನಂ. 484/ಎಫ್ ವಿಸ್ತೀರ್ಣ 2.22 ಎಕರೆ ಜಮೀನನ್ನು ಹಾಗೂ 2ನೇ ವಾದಿಗಳಾದ ಗಡ್ಡದ ವೆಂಕಟೇಶಗೌಡ ಇವರ ಹೆಸರಿಗೆ ಸ.ನಂ. 484/ಜಿ ವಿಸ್ತೀರ್ಣ 2.64 ಎಕರೆ ಜಮೀನನ್ನು ಖಾತೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: 07.04.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

07/04

[ನಾಗರಾಜ.ಹೆಚ್]
**ಉಪ ತಹಶೀಲ್ದಾರರು,**
**ತಂಬ್ರಹಳ್ಳಿ**

ಉಪ ತಹಶೀಲ್ದಾರರು,
ನಾಡ ಕಛೇರಿ, ತಂಬ್ರಹಳ್ಳಿ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

11/04/16